ಇಂದು ದಿಃ**24-02-2026** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಂ.ಎನ್ ವಕೀಲರಿಂದ 3 ಮತ್ತು 9 ನೇ ಪ್ರತಿವಾದಿಗಳ ಪರಃ**

ಸರ್ವೆ ನಂಬರ್ 57/1 ರ ಪಹಣಿ ಈ ದಾವೆ ದಾಖಲು ಮಾಡುವ ಸಮಯದಲ್ಲಿ 3 ನೇ ಪ್ರತಿವಾದಿಯ ಹೆಸರಿಗೆ ಇತ್ತು. ನಂತರದಲ್ಲಿ ಆತ ಸದರಿ ಆಸ್ತಿಯನ್ನು ದಾನಪತ್ರ ಮಾಡಿಕೊಟ್ಟ ವಿಷಯ ಗೊತ್ತು. ದಿನಾಂಕಃ28-09-2017 ರಂದು ತನ್ನ ಮಗ ಅಂಜಿನಪ್ಪ ಮತ್ತು ಹೆಂಡತಿಗೆ ದನಾಪತ್ರ ಮಾಡಿದ್ದಾನೆ ಎಂದರೆ ಸರಿ. ಈ ದಾನಪತ್ರದ ಪ್ರಕಾರ ಸದರಿ ಆಸ್ತಿಯ ಖಾತೆ ಮತ್ತು ಪಹಣಿ 3 ನೇ ಪ್ರತಿವಾದಿಯ ಹೆಂಡತಿ ಮತ್ತು ಮಗನ ಹೆಸರಿಗೆ ಆಗಿದೆ ಎಂದರೆ ಸರಿ. ಮೊದಲು ಸದರಿ ಜಮೀನಿನಲ್ಲಿ ಭತ್ತ ಬೆಳೆಯುತ್ತಿದ್ದು, ಈಗ ಒಂದು ಬೆಳೆಯನ್ನು ಬೀಳು ಬಿಟ್ಟಿದ್ದಾರೆ ಎಂದರೆ ಸರಿ. ಈ ಜಮೀನನ್ನು ಬೀಳು ಬಿಡುವ ಮೊದಲು, 3 ನೇ ಪ್ರತಿವಾದಿಯ ಹೆಂಡತಿ ಮತ್ತು ಮಗ ನಮ್ಮ ವಿರುದ್ಧ ಅವರ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆ ಎಂದು ಪದೇ ಪದೇ ಠಾಣೆಯಲ್ಲಿ ದೂರುಕೊಡತ್ತಿದ್ದರು ಎಂದರೆ ಸರಿ. ಈ ಹಿಂದೆ ನಾವು ಠಾಣೆಯಲ್ಲಿ ಅವರ ಸ್ವಾಧೀನಕ್ಕೆ ತೊಂದರೆ ಕೊಡುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿದ್ದೇವೆ ಎಂದರೆ ಸಾಕ್ಷಿ ಏನು ನ್ಯಾಯಾಯಲದಲ್ಲಿ ತೀರ್ಮಾನ ಆಗುತ್ತದೆ, ಆ ಪ್ರಕಾರ ನಡೆದುಕೊಳುತ್ತೇವೆ ಎಂದು ಬರೆದುಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ.

ನನ್ನ ತಂದೆ ಪರಸಪ್ಪ ತೀರಿಕೊಂಡಿದ್ದಾರೆ ಎಂದರೆ ಸರಿ. ನಾನು ಮತ್ತು ಉಳಿದ ವಾದಿಯರು ಒಂದೇ ಮನೆಯಲ್ಲಿ ವಾಸ ಇದ್ದೇವೆ ಎಂದರೆ ಸರಿ. ಶೇಖರಪ್ಪನಿಗೆ 4 ಜನ ಮಕ್ಕಳು. ಅವರು ಸಹ ಪ್ರತ್ಯೇಕವಾಗಿ ವಾಸ ಇದ್ದಾರೆ ಎಂದರೆ ಸರಿ. ಅದೇ ರೀತಿ 3 ರಿಂದ 5 ನೇ ಪ್ರತಿವಾದಿಯರು ಸಹ ಅವರವರ

ಕುಟುಂಬದೊಂದಿಗೆ ಪ್ರತ್ಯೇಕವಾಗಿ ವಾಸ ಇದ್ದಾರೆ ಎಂದರೆ ಸರಿ. ಸುಮಾರು 10-15 ವರ್ಷಗಳಿಂದ 2, 3 ರಿಂದ 5 ನೇ ಪ್ರತಿವಾದಿಯರು ಬೇರೆ ಬೇರೆಯಾಗಿ ವಾಸವಾಗಿದ್ದಾರೆ. 3 ನೇ ಪ್ರತಿವಾದಿಯ ಹೆಂಡತಿಯ ಹೆಸರಿಗೆ ಇರುವ 3 ಎಕರೆ ಹೊರತುಪಡಿಸಿ, ನೀವು ಎಷ್ಟು ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಒಂದು ಎಕರೆ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ. 57 ನೇ ಸರ್ವೆ ನಂಬರ್ ನಲ್ಲಿ ಉಳುಮೆ ಮಾಡುತ್ತಿದ್ದೇವೆ. ನಾನು ಮಾಡುತ್ತಿರುವ ಒಂದು ಎಕರೆ ಜಮೀನಿನ ಪೂರ್ವಕ್ಕೆ ವಿರುಪಾಕ್ಷಪ್ಪನ ಜಮೀನು, ಪಶ್ಚಿಮಕ್ಕೆ ವೀರಯ್ಯ, ಉತ್ತರಕ್ಕೆ ಗಿರಿಜಮ್ಮ ಮತ್ತು ದಕ್ಷಿಣಕ್ಕೆ ಗೋಮಾಳ ಜಮೀನು ಬರುತ್ತದೆ. ಉತ್ತರಕ್ಕೆ ನಾನು ಹೇಳುವ ಗಿರಿಜಮ್ಮಳ ಜಮೀನು ಎಂದರೆ ದಾನಪತ್ರದ ಅಡಿ ಆಕೆಗೆ ಬಂದ ಜಮೀನು ಎಂದರೆ ಸರಿ.

ನಾವು ವಾಸು ಇರುವ ಮನೆ ನನ್ನ ತಾಯಿಯ ಹೆಸರಿಗೆ ಇದೆ. ಪರಸಪ್ಪನಿಗೆ ಬಂದಿದ್ದ ಮನೆಯನ್ನು, ಸರ್ಕಾರದ ಸೌಲಭ್ಯ ಪಡೆಯಲು ನನ್ನ ತಾಯಿಯ ಹೆಸರಿಗೆ ಮಾಡಿಕೊಂಡಿದ್ದೇವೆ ಎಂದರೆ ಸರಿ. 2 ನೇ ಪ್ರತಿವಾದಿ 2 ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದಾನೆ. ಸರ್ವೆ ನಂಬರ್ 3/2 ರಲ್ಲಿ ಉಳುಮೆ ಮಾಡುತ್ತಿದ್ದಾನೆ. ಸದರಿ ಜಮೀನಿನ ಚಕ್ ಬಂದಿ ಹೇಳು ಆಗುವುದಿಲ್ಲ. ಸುಮಾರು 10-15 ವರ್ಷಗಳಿಂದ 2 ನೇ ಪ್ರತಿವಾದಿ ಈ ಜಮೀನನ್ನು ಉಳುಮೆ ಮಾಡುತ್ತಿದ್ದಾನೆ. 2 ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಮನೆ ಆತನ ಹೆಂಡತಿ ಪಾರ್ವತಮ್ಮ ಇವಳ ಹೆಸರಿಗೆ ಇದೆ ಎಂದರೆ ಸರಿ. ಆ ಮನೆಯಲ್ಲಿ 2 ನೇ ಪ್ರತಿವಾದಿಯ ಕುಟುಂಬ ವಾಸ ಇದೆ ಎಂದರೆ ಸರಿ. ಅದೇ ರೀತಿ 2 ನೇ ಪ್ರತಿವಾದಿಯ ಹೆಂಡತಿಯ ಹೆಸರಿಗೆ ಖಾಲಿ ಜಾಗ ಸಹ ಇದೆ ಎಂದರೆ ಸರಿ. 3 ನೇ ಪ್ರತಿವಾದಿ ದಾನಪತ್ರ ಆಗಿರುವ 3 ಎಕರೆ ಜಮೀನನ್ನು ಮಾತ್ರ ಉಳುಮೆ ಮಾಡುತ್ತಾನೆ. ಬೇರೆ ಯಾವುದೇ ಜಮೀನನ್ನು ಉಳುಮೆ ಮಾಡುವುದಿಲ್ಲ. 3 ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಮನೆ ಆತನ ಹೆಂಡತಿಯ ಹೆಸರಿನಲ್ಲಿ ಇದೆ ಎಂದರೆ ಸರಿ.

ಆ ಮನೆಯಲ್ಲಿ 3 ನೇ ಪ್ರತಿವಾದಿ ಮತ್ತು ಅವರ ಕುಟುಂಬದ ವಾಸ ಇದೆ ಎಂದರೆ ಸರಿ. ನಿ.ಪಿ-9 ರಿಂದ 11 ರ ಪ್ರಕಾರ ಸದರಿ ಆಸ್ತಿಗಳಿಗೆ ಪಾರ್ವತಮ್ಮ ಮತ್ತು ಪರಸಪ್ಪ ಇವರ ಹೆಸರುಗಳು ದಾಖಲಾಗಿರುವುದು ಕಂಡು ಬರುತ್ತವೆ ಎಂದರೆ ಸರಿ. ಐಟಂ ನಂಬರ್ 3, ಸರ್ವೆ ನಂಬರ್ 64/2 ಇದು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ. ಸದರಿ ಜಮೀನಿನ ಕ್ರಯಪತ್ರ ಅವನ ಹೆಸರಿನಲ್ಲಿ ಇದ್ದು, ಅವನ ಅನುಭೋಗದಲ್ಲಿ ಇದೆ ಎಂದರೆ ಸರಿ. ಐಟಂ ನಂಬರ್ 4 ಮನೆಯಲ್ಲಿ 5 ನೇ ಪ್ರತಿವಾದಿ ವಾಸ ಇದ್ದಾನೆ ಎಂದರೆ ಸರಿ. ನಾವು ವಾಸ ಇರುವ ಮನೆಯ ಪೂರ್ವಕ್ಕೆ 3 ನೇ ಪ್ರತಿವಾದಿಯ ಮನೆ ಇದೆ ಎಂದರೆ ಸರಿ. ಐಟಂ ನಂಬರ್ 6 ಆಸ್ತಿಯಲ್ಲಿ 3 ನೇ ಮತ್ತು ಆತನ ಕುಟುಂಬ ವಾಸ ಇದೆ ಎಂದರೆ ಸರಿ. ಐಟಂ ನಂಬರ್ 9 ಆಸ್ತಿಯಲ್ಲಿ 2 ನೇ ಪ್ರತಿವಾದಿ ವಾಸ ಇದ್ದಾನೆ ಎಂದರೆ ಸರಿ.

ನಾವು ಪ್ರತ್ಯೇಕವಾಗಿ ಅನುಭವದಲ್ಲಿ ಇರುವ ಜಮೀನುಗಳಿಗೆ ಪಹಣಿ ಆಗದೇ ಇರುವ ಕಾರಣ, ಪಹಣಿ ಆಗಲಿ ಎಂದು ಈ ದಾವೆ ಮಾಡಿದ್ದೇವೆ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಮೇಲೆ ಹೇಳಿದ ವಿಷಯಗಳ ಕುರಿತು ಮಾಹಿತಿ ಬಿಟ್ಟು ಬೇರೆ ಯಾವುದೇ ಸಂಗತಿಗಳನ್ನು ತಿಳಿಸಿಲ್ಲ ಎಂದರೆ ಸರಿ. ಅದೇ ರೀತಿ ದಾವೆಯಲ್ಲಿಯೂ ಬೇರೆ ಯಾವುದೇ ವಿಷಯ ತಿಳಿಸಿಲ್ಲ ಎಂದರೆ ಸರಿ. ನಾವು ಅನುಭವದಲ್ಲಿ ಇರುವ ಆಸ್ತಿಗಳಿಗೆ ಡಿಕ್ರಿ ಆಗಲು ನಮ್ಮ ಒಪ್ಪಿಗೆ ಇದೆ ಎಂದರೆ ಸರಿ.

ಈ ದಾವೆಯಲ್ಲಿ 3 ನೇ ಪ್ರತಿವಾದಿ ಏನು ತಕರಾರು ಸಲ್ಲಿಸಿದ್ದಾನೆ ಎಂದು ಮಾಹಿತಿ ಇಲ್ಲ. ದಿನಾಂಕಃ01-12-2008 ರಂದು 3 ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂಬರ್ 57 ರಲ್ಲಿ ಖರೀದಿ ಆದಾಗ ಯಾರಾರು ಸಾಕ್ಷಿ ಸಹಿ ಮಾಡಿದ್ದಾರೆ ಎಂದು ಮಾಹಿತಿ ಇದೆಯಾ ಎಂದರೆ ಸಾಕ್ಷಿ ಬಸಪ್ಪ ಮತ್ತು ಶಾರದಮ್ಮ ಸಹಿ ಮಾಡಿದ್ದಾರೆ ಎಂದು ಹೇಳುತ್ತಾರೆ. ವೀರಭದ್ರಯ್ಯ ಎನ್ನುವವರಿಂದ 3 ನೇ ಪ್ರತಿವಾದಿ

ಖರೀದಿ ಮಾಡಿರುತ್ತಾನೆ. ಈ ಸರ್ವೆ ನಂಬರ್ 57 ರಲ್ಲಿ 3 ಎಕರೆ ಮೂಲತಃ ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸದರಿ ಜಿ.ಎಂ ವೀರಭದ್ರಯ್ಯ ಇವರಿಗೆ ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಮಾರಾಟ ಮಾಡಿದ್ದರು ಎಂದರೆ ಸರಿ. ನಂತರ ದಿನಾಂಕಃ28-09-2017 ರಂದು 3 ನೇ ಪ್ರತಿವಾದಿ ಈ ಜಮೀನನ್ನು ತನ್ನ ಹೆಂಡತಿ ಮತ್ತು ಮಗನಿಗೆ ದಾನಪತ್ರ ಮಾಡಿಕೊಟ್ಟನು ಎಂದರೆ ಸರಿ. ನಂತರ ಜಮೀನಿನಲ್ಲಿ ಗಲಾಟೆಯಾಗಿ, ಕಮೀಷನರ್ ಮೂಲಕ ಭತ್ತವನ್ನು ಕಟಾವು ಮಾಡಿದ ನಂತರ, ಈಗ ಗಿರಿಜಮ್ಮ ಸದರಿ ಜಮೀನನ್ನು ಬೀಳು ಬಿಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ 5 ನೇ ಪ್ರತಿವಾದಿ ಅರ್ಧ ಮತ್ತು 3 ನೇ ಪ್ರತಿವಾದಿ ಅರ್ಧ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಪೂರ್ಣ ಜಮೀನನ್ನು ಗಿರಿಜಮ್ಮ ಉಳುಮೆ ಮಾಡುತ್ತಿದ್ದಳು ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಸಹ ಅರ್ಧ ಜಮೀನನ್ನು ಉಳುಮೆ ಮಾಡುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ 3 ಎಕರೆ ಜಮೀನು ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳು ದಾವೆ ಮಾಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗಿರಿಜಮ್ಮ ಸಹ ಅಸಲು ದಾವಾ ನಂಬರ್ 25/2019 ನ್ನು ಹರಿಹರದ ಸಿವಿಲ್ ನ್ಯಾಯಾಲಯದಲ್ಲಿ ದಾಖಲು ಮಾಡಿದ್ದರು ಎಂದರೆ ಸರಿ. ಭತ್ತ ಕೊಯುವ ಸಮಯದಲ್ಲಿ ಪೋಲೀಸರು ನಮ್ಮನ್ನು ಕರೆಯಿಸಿ, ಗಲಾಟೆ ಮಾಡಬೇಡಿ ಎಂದು ಹೇಳಿದ್ದರು ಎಂದರೆ ಸರಿ. ದಾವಾ ಆಸ್ತಿಗಳ ಪಹಣಿಗಳನ್ನು ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಸರ್ವೆ ನಂಬರ್ 57 ರ ಅನುಭವದಲ್ಲಿ 5 ನೇ ಪ್ರತಿವಾದಿ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

PW-1

**7 ಮತ್ತು 8 ನೇ ಪ್ರತಿವಾದಿಯರ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.